'ಹಿಂದ್ ಸ್ವರಾಜ್', 'ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ', 'ನನ್ನ ಸತ್ಯಾನ್ವೇಷಣೆ' – ಹೀಗೆ ಗಾಂಧೀಜಿ ಅವರು ಕೆಲವೇ ಪುಸ್ತಕಗಳನ್ನು ಬರೆದರೂ, ದಶಕಗಳ ಕಾಲ ಅವರು, 'ಇಂಡಿಯನ್ ಒಪೀನಿಯನ್', 'ಯಂಗ್ ಇಂಡಿಯಾ', 'ಹರಿಜನ್', 'ನವಜೀವನ್' ಪತ್ರಿಕೆಗಳಿಗೆ ಮೂರು ಭಾಷೆಗಳಲ್ಲಿ ಬರೆದರು. ಪ್ರತಿದಿನವೂ ಭಾರತೀಯರು ಸೇರಿದಂತೆ ವಿಶ್ವದ ವಿವಿಧ ಭಾಗಗಳಿಂದ ಬರುತ್ತಿದ್ದ ಪತ್ರಗಳಿಗೆ ತಪ್ಪದೆ ಉತ್ತರಿಸುತ್ತಿದ್ದರು. 'ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ' ಎಂಬ ನೂರು ಪುಸ್ತಕಗಳ ಗ್ರಂಥ ಸಂಪುಟಗಳಲ್ಲಿ ಗಾಂಧೀಜಿ ತಮ್ಮ ಜೀವಿತಾವಧಿಯಲ್ಲಿ ಬರೆದಿರುವ 31,000ಕ್ಕೂ ಹೆಚ್ಚು ಪತ್ರಗಳನ್ನು ಸಂಗ್ರಹಿಸಲಾಗಿದೆ.

'ದಿ ಎಸೆನ್ಷಿಯಲ್ ರೈಟಿಂಗ್ಸ್ ಆಫ್ ಮಹಾತ್ಮ ಗಾಂಧಿ' ಗ್ರಂಥವನ್ನು ಸಂಪಾದಿಸಿರುವ ರಾಘವನ್ ಅಯ್ಯರ್ ಅವರ ಪ್ರಕಾರ, ಗಾಂಧೀಜಿ ನಾಲ್ಕು ದಶಕಗಳ ಕಾಲ ದಿನವೊಂದಕ್ಕೆ ಕನಿಷ್ಠ ಎಪ್ಪತ್ತು ಪತ್ರಗಳನ್ನಾದರೂ ಬರೆದಿದ್ದಾರೆ.

ಗಾಂಧೀಜಿ ಪ್ರತಿದಿನ ಸತತ ನಾಲ್ಕು ತಾಸು ಪತ್ರ ಬರೆಯುತ್ತಿದ್ದರಂತೆ. ಬರೆದೂ ಬರೆದು ಬಲಗೈ ನೋವಾದರೆ, ಎಡಗೈಯಲ್ಲಿ ಬರೆಯುತ್ತಿದ್ದರು. ಹಿಂದಿ, ಇಂಗ್ಲಿಷ್, ಗುಜರಾತಿ – ಮೂರೂ ಭಾಷೆಗಳಲ್ಲಿ ಬರೆಯುತ್ತಿದ್ದರು. ಪತ್ರದಲ್ಲಿ ಅವರು ಬರೆಯದ ವಿಷಯಗಳಿಲ್ಲ. ಸತ್ಯಾಗ್ರಹದ ಮಹತ್ವ, ಖಾದಿಯ ಸಿದ್ಧಾಂತ, ರಾಜಕೀಯ ಹೋರಾಟ, ಧರ್ಮ, ಆರೋಗ್ಯ, ನೈರ್ಮಲ್ಯ, ನೈತಿಕತೆ – ಹೀಗೆ ಹಲವಾರು ವಿಷಯಗಳ ಬಗ್ಗೆ ಬರೆದಿದ್ದಾರೆ.

1908ರಲ್ಲಿ ಲಂಡನ್ನಿನಿಂದ ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣಿಸುತ್ತಿರುವಾಗ, ಕೇವಲ ಒಂಬತ್ತು ದಿನಗಳಲ್ಲಿ ಬರೆದ ಕೃತಿ 'ಹಿಂದ್ ಸ್ವರಾಜ್'. 271 ಪುಟಗಳ ಈ ಪುಸ್ತಕವನ್ನು ಬರೆಯುತ್ತಾ ಬಲಗೈ ನೋಯತೊಡಗಿದಾಗ, ಗಾಂಧೀಜಿ ಎಡಗೈಯಲ್ಲೇ ಸುಮಾರು 30 ಪುಟಗಳನ್ನು ಬರೆದರಂತೆ.

ಅಂದಹಾಗೆ, ಇಷ್ಟೆಲ್ಲಾ ಬರೆದ ಅವರು ಬಳಸುತ್ತಿದ್ದುದು ಯಾವ ಪೆನ್ನು?

### ಗಾಂಧೀಜಿಯೆಂಬ 'ಪತ್ರ'ಕರ್ತ

'ಅವರ ಕೈಗಳು ಒಂದೋ ಚರಕವನ್ನು ತಿರುವುತ್ತಿದ್ದವು, ಇಲ್ಲವೇ ಬರವಣಿಗೆಯಲ್ಲಿ ತೊಡಗಿರುತ್ತಿದ್ದವು' ಎಂದು ತಮ್ಮ ತಾತನ ಬಗ್ಗೆ ಬರೆದಿದ್ದಾರೆ, ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿದ್ದ ಮಹಾತ್ಮ ಗಾಂಧಿ ಮೊಮ್ಮಗ (ದೇವದಾಸ್ ಗಾಂಧಿ ಮಗ) ಗೋಪಾಲಕೃಷ್ಣ ಗಾಂಧಿ.

ಶಾಲೆಯಲ್ಲಿ 'ಕೆಟಲ್' ಪದವನ್ನು ತಪ್ಪಾಗಿ ಬರೆದದ್ದರಿಂದ ಹಿಡಿದು ಸಾಯುವ ದಿನದವರೆಗೆ ಗಾಂಧೀಜಿ ಬರವಣಿಗೆಯ ಕುರಿತ ಕಥೆ– ದಾಖಲೆಗಳಿವೆ. ಪೆನ್ಸಿಲ್, ಫೌಂಟನ್ ಪೆನ್, ಶಾಯಿಯಲ್ಲಿ ಅದ್ದಿ ಬರೆಯುವ ಬಿದಿರಿನಿಂದ ತಯಾರಿಸಿದ ರೀಡ್ ಪೆನ್ – ಇವುಗಳು ಅವರ ಬದುಕಿನ ಭಾಗವಾಗಿದ್ದವು. ಅವುಗಳಲ್ಲಿ ಕೆಲವು ಉಡುಗೊರೆಯಾಗಿ ಬಂದವು, ಕೆಲವು ಅವರೇ ಹಣ ಕೊಟ್ಟು ಖರೀದಿಸಿದ್ದವು. ದುಬಾರಿ ಪೆನ್ನುಗಳನ್ನು ಯಾರಾದರೂ ಕೊಡಲು ಬಂದರೆ ಗಾಂಧೀಜಿ ನಿರಾಕರಿಸುತ್ತಿದ್ದರು.



My Mouth is Gagged

Reg. No. B 3692

# HARIJAN

Editor: K. G. MASHRUWALA

Vol. IX, No. 32] AHMEDABAD — SUNDAY, AUGUST 23, 1942 [Five Pice

**MAHADEV DESAI**

On the 15th of August at about 8-30 P. M., Sevagram was informed over the phone by our Wardha friends that they heard over the radio the following communique of the Government of Bombay:

"The Government of Bombay regret to report the death, about 8-40 a. m., on Saturday, of Mr. Mahadev Desai, who was recently detained under the Defence of India Rules.

Mr. Desai was engaged in conversation with Col. Bhandari, I. M. S., Inspector-General of Prisons, and two of his fellow prisoners when he complained of giddiness. Col. Bhandari advised him to lie down and he found that his pulse was low and that he seemed cold. Dr. Sushila Nair who is detained in the same building was sent for and she arrived at once. As the Civil Surgeon could not immediately be found, another I. M. S. officer was summoned.

Injections were given to stimulate the action of the heart and everything else possible was done to keep up Mr. Desai's strength, but he died from heart failure only 20 minutes from the time when he first complained of feeling unwell."

Though the information was fairly detailed, the three or four persons who first got it were altogether unwilling to believe it, and pressed me not to break it immediately to Durgaben and Narayan (Mahadevbhai's wife and son respectively). Infructuous attempts were made to register trunk calls, and at last it was decided that while telegraphic confirmation should be sought from the Prison authorities, the news should be communicated to the family as it was. For a long time they refused to believe it. Both of them urged, "We are unable to feel the shock, which such news ought to give us. Hence, we feel that it must be false." Others concurred. I was alone to [illegible] otherwise. It was a difficult situation for [illegible] Within a short time they were bound to be disillusioned. But should I say that this was wishful thinking? I kept silent and allowed them to express themselves.

At about 10-30 p. m. a condolence telegram was received from Bombay, followed shortly after by another from the Inspector General of Prisons, giving the bearest text "Regret Mr. Mahadev Desai died suddenly this morning of heart failure — Prisons."

The telegram was despatched at 10-5 P. M., and yet it does not say whether and how his body was disposed of subsequently. To the time of writing this, there is no further information, as indeed there is none about Gandhiji himself. But even before this confirmation had come, the usual mental process had gone on, and within a few minutes tears gushed out of their eyes involuntarily, and the mother and the son began to assure and comfort one another that though the information must be false, even if it were true, they should face it bravely, — Narayan urging, "Father has died at a time and in a manner which are most enviable, and which we shall always remain proud of."

Late Shri Mahadev Desai

**He Did It**

At the time when Mahadevbhai was, unknown to us, expiring at Poona, some of us at Wardha were considering the local and general situation, and contemplating to take some steps involving risk to our own lives. But not being used to take quick decisions, and still less to take action, we thought and ruminated over deadly non-violent methods of creating the force which will make India free. We thought and dispersed, not knowing that at the other end, Mahadevbhai had already done it and finished his part of the programme. A satirist amongst us remarked light-heartedly that it was not given to everyone to die gloriously.

ಮಹಾತ್ಮರು ರೂಪಿಸುತ್ತಿದ್ದ 'ಹರಿಜನ್' ಪತ್ರಿಕೆಯ ಒಂದು ಸಂಚಿಕೆ

ಗಾಂಧೀಜಿ ಅವರ ಬರಹಗಳನ್ನೆಲ್ಲಾ ಒಗ್ಗೂಡಿಸಿ ಪ್ರಕಟಿಸಿದ ನೂರು ಸಂಪುಟಗಳಲ್ಲಿ, ಒಂದು ಕೋಟಿ ಎಪ್ಪತ್ತು ಲಕ್ಷ ಪದಗಳಿವೆ!

ಗಾಂಧೀಜಿ ಯಾವುದನ್ನೂ ವ್ಯರ್ಥ ಮಾಡುತ್ತಿರಲಿಲ್ಲ. ತಮಗೆ ಬಂದ ಲಕೋಟೆಯಲ್ಲಿ ಖಾಲಿ ಜಾಗವಿದ್ದರೆ ಅದರ ಮೇಲೂ ಬರೆಯುತ್ತಿದ್ದರು. ಕಡು ನೀಲಿ ಬಣ್ಣದ ಶಾಯಿಯನ್ನೇ ಹೆಚ್ಚಾಗಿ ಬಳಸುತ್ತಿದ್ದರಾದರೂ, ಅಪರೂಪಕ್ಕೊಮ್ಮೆ ಹಸಿರು ಮತ್ತು ನೇರಳೆ ಬಣ್ಣದ್ದೂ ಬಳಸುತ್ತಿದ್ದರು.

ತಮ್ಮ ಮೊಮ್ಮಕ್ಕಳಿಗೆ, 'ಶಾಯಿ ಪೆನ್ನನ್ನೇ ಬಳಸಿ, ಪೆನ್ಸಿಲ್‌ನಲ್ಲಿ ಬರೆಯಬೇಡಿ, ಅಕ್ಷರಗಳು ಸ್ಪಷ್ಟವಾಗಿ ಮೂಡುವುದಿಲ್ಲ, ಮುದ್ದಾಗಿಯೂ ಇರುವುದಿಲ್ಲ' ಎನ್ನುತ್ತಿದ್ದರು.

ಯಾವ ಕಂಪನಿಯ ಪೆನ್ನನ್ನು ಗಾಂಧೀಜಿ ಬಳಸುತ್ತಿದ್ದರು ಎಂಬ ಸಂಗತಿ ಎಲ್ಲಿಯೂ ದಾಖಲಾಗಿಲ್ಲ. ಬಹುಶಃ ಆಗ ಯಾರಿಗೂ ಅದು ಮುಖ್ಯವೆನಿಸಿರಲಿಕ್ಕಿಲ್ಲ. ಪೆನ್ನುಗಳು ಮತ್ತು ದೇಶೀ ತಯಾರಿಕೆಯ ಶಾಯಿಯ ಬಗ್ಗೆ ಮೋಹವಿದ್ದ ಬಂಗಾಳದ ತಮ್ಮ ಆಪ್ತ ಒಡನಾಡಿ ಸತೀಶ ಚಂದ್ರ ದಾಸಗುಪ್ತ ಅವರಿಗೆ 1924ರಲ್ಲಿ ಗಾಂಧೀಜಿ ಪತ್ರ ಬರೆದಿದ್ದರು. ಅದರಲ್ಲಿ, 'ನೀವು ಕೊಟ್ಟ ಪೆನ್ನಿನಿಂದ ನಾನು ನಿಮಗೆ ಈ ಪತ್ರವನ್ನು ಬರೆಯುತ್ತಿದ್ದೇನೆ. ನೀವು ಈ ಹಿಂದೆ ಕೊಟ್ಟಿದ್ದ ಪೆನ್ನನ್ನು ಜೋಪಾನವಾಗಿ ಎತ್ತಿಟ್ಟುಕೊಂಡಿದ್ದೆ. ನನಗೆ ಇಷ್ಟವಾದ ಪೆನ್ನನ್ನು ನಾನು ಬೇರೆಯವರಿಗೆ ಕೊಡುವುದಿಲ್ಲ. ಒಮ್ಮೆ ನಾನು ಅದನ್ನು ಇಂದುಲಾಲ್‌ಗೆ ಕೊಟ್ಟೆ, ಅದು ಕೆಟ್ಟುಹೋಯಿತು. ಅದನ್ನು ಆತ ದುರಸ್ತಿಗೆ ಕಳಿಸಿದ. ಅದನ್ನು ತೆಗೆದುಕೊಂಡು ಹೋಗಿದ್ದವ ಅದನ್ನು ಕಳೆದುಬಿಟ್ಟ. ನಂತರ ಕೃಷ್ಣದಾಸ ನೀವು ಕಳಿಸಿರುವ ಈಗ ಬರೆಯುತ್ತಿರುವ ಪೆನ್ನನ್ನು ತಂದುಕೊಟ್ಟ'. ಈ ಪತ್ರ, ಅವರು ಪೆನ್ನಿಗೆ ಕೊಡುತ್ತಿದ್ದ ಮಹತ್ವವನ್ನು ಹೇಳುವಂತಿದೆ.

ಪೆನ್ನನ್ನು ಗಾಂಧೀಜಿ ರೂಪಕವಾಗಿಯೂ ಬಳಸಿದ್ದಾರೆ. 1925ರಲ್ಲಿ ದೇಶಬಂಧು ಸಿ.ಆರ್. ದಾಸ್ ನಿಧನರಾದಾಗ, 'ಮನಸ್ಸಿಗೆ ಗಾಯವಾದಾಗ, ಪೆನ್ ಚಲನೆಯನ್ನು ಕಳೆದುಕೊಳ್ಳುತ್ತದೆ. ಅತ್ಯಂತ ದುಃಖದಲ್ಲಿರುವ ನನಗೆ ಯಂಗ್ ಇಂಡಿಯಾ ಪತ್ರಿಕೆಯ ಓದುಗರುದ್ದೇಶಿಸಿ ಬರೆಯಲು ಆಗುತ್ತಿಲ್ಲ...' ಎಂದು ಗಾಂಧೀಜಿ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

1934ರಲ್ಲಿ ಬಹುಶಃ ಗಾಂಧೀಜಿ ಬಳಸುತ್ತಿದ್ದ ಪೆನ್ ಕಳೆದಿದ್ದರಿಂದ, ಶಾಯಿಯಲ್ಲಿ ಅದ್ದಿ

## ದಣಿವರಿಯದ ಬರವಣಿಗೆ

ಸುಮಾರು ಐವತ್ತು ವರ್ಷಗಳ ಕಾಲ ಸತತವಾಗಿ ವೃತ್ತಿಪರ ಪತ್ರಕರ್ತನೊಬ್ಬ ಬರೆದರೆ ಎಷ್ಟಾಗುವುದೋ ಅದಕ್ಕಿಂತ ಹೆಚ್ಚನ್ನು ಇಪ್ಪತ್ತೈದು ವರ್ಷಗಳ ಅವಧಿಯಲ್ಲೇ ಗಾಂಧೀಜಿ ಬರೆದಿದ್ದಾರೆ. ಗಾಂಧೀಜಿಯ ಬರವಣಿಗೆಯ ಗ್ರಂಥಸರಣಿಯನ್ನು ಸಂಪಾದಿಸಿರುವ ಕೃಷ್ಣಸ್ವಾಮಿ ಸ್ವಾಮಿನಾಥನ್ ಹೇಳುವಂತೆ, 'ಗಾಂಧೀಜಿಯ ಉಡುಪಿನಂತೆ ಅವರ ಬರಹ ಕೂಡ ಸರಳ ಮತ್ತು ನಿರಾಡಂಬರ. ಅವರು ವಿಶೇಷಣಗಳನ್ನು ಬಳಸುತ್ತಿರಲಿಲ್ಲ. ವಿಷಯದಿಂದಲೇ ಗಮನ ಸೆಳೆಯಬೇಕೇ ಹೊರತು ಭಾಷೆಯ ಆಡಂಬರದಿಂದಲ್ಲ ಎಂಬುದು ಗಾಂಧೀಜಿ ಲೇಖನ, ಸಂಪಾದಕೀಯಗಳನ್ನು ಓದಿದರೆ ತಿಳಿಯುತ್ತದೆ'.

ಗಾಂಧೀಜಿ ತಮ್ಮ ನಾಲ್ಕು ದಶಕಗಳ ಪತ್ರಕರ್ತನ ಬದುಕಿನಲ್ಲಿ, 'ಇಂಡಿಯನ್ ಒಪಿನಿಯನ್', 'ಯಂಗ್ ಇಂಡಿಯಾ', 'ಹರಿಜನ್', 'ಹರಿಜನ್ ಸೇವಕ್', 'ಹರಿಜನ ಬಂಧು' ಮತ್ತು 'ನವಜೀವನ್' ಎಂಬ ಆರು ಪತ್ರಿಕೆಗಳನ್ನು ನಡೆಸಿದರು. ಪತ್ರಿಕೋದ್ಯಮವೆಂದರೆ ಸತ್ಯ–ನ್ಯಾಯವನ್ನು ಅರಸುವ ಮಾಧ್ಯಮ ಎಂದವರು ಭಾವಿಸಿದ್ದರು.